ಅಧ್ಯಕ್ಷರು :- ಯಾರಾದರೂ ಸದಸ್ಯರು ಗೈರು ಹಾಜರಾಗುವುದಿದ್ದರೆ ಅವರು ನನಗೆ ಮೊದಲೇ ಬರೆದು ತಿಳಿಸಬೇಕು. ನಾನು ಇಂತಹ ದಿವಸ ಬರುವುದಕ್ಕೆ ಆಗುವುದಿಲ್ಲ. ನನ್ನ ಪರವಾಗಿ ಪ್ರಶ್ನೆಯನ್ನು ಕೇಳಲು ನಾನು ಇಂತಹವರಿಗೆ ಅಥರೈಸ್ ಮಾಡುತ್ತಿದ್ದೇನೆ ಎಂದು ಅವರು ಮೊದಲೇ ನನಗೆ ತಿಳಿಸಿದ್ದಲ್ಲಿ ಮಾತ್ರ, ನಾನು ಅವರ ಹೆಸರಿನಲ್ಲಿರತಕ್ಕಂತಹ ಪ್ರಶ್ನೆಯನ್ನು ಬೇರೆಯವರು ಕೇಳುವುದಕ್ಕೆ ಅನುಮತಿ ಕೊಡುತ್ತೇನೆ. ಮಾನ್ಯ ಸದಸ್ಯರು ಈ ಪ್ರೋಸೀಜರ್ ತಿಳಿದುಕೊಂಡಿದ್ದರೆ ಒಳ್ಳೆಯದು. ಪ್ರೋಸೀಜರ್ ಗೊತ್ತಾಗಲಿ ಎಂಬ ದೃಷ್ಟಿಯಿಂದ ನಾನಿದನ್ನು ಹೇಳಬೇಕಾಯಿತು.

ವಿಷಯ :- ಹುಬ್ಬಳ್ಳಿ ಮಹಾನಗರದ ಸ್ಮಶಾನ ಭೂಮಿ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 225 (756)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಮಹಾನಗರದ ನಾಗಶೆಟ್ಟಿಕೊಪ್ಪ ಮತ್ತು ಬೆಂಗೇರಿ ಭಾಗದಲ್ಲಿ ಕೇಶ್ವಾಪುರ ಸ್ಮಶಾನ ಪ್ರದೇಶದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಆ ಭಾಗದಲ್ಲಿ ಹೊಸ ಸ್ಮಶಾನ ಪ್ರದೇಶ ನಿರ್ಮಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

ಅ) ಬಂದಿದೆ.

ಆ) ಹುಬ್ಬಳ್ಳಿ ಮಹಾನಗರದ ನಾಗಶೆಟ್ಟಿ ಕೊಪ್ಪ ಮತ್ತು ಬೆಂಗೇರಿ ಭಾಗದಲ್ಲಿಯ ನಾಗರೀಕರಿಗೆ ಪ್ರತ್ಯೇಕವಾದ ಸ್ಮಶಾನ ಪ್ರದೇಶದ ಅವಶ್ಯಕತೆ ಇರುವುದನ್ನು ಮನಗಂಡು ಈಗಾಗಲೇ ಬೆಂಗೇರಿ ಗ್ರಾಮದ ರಿಸ ಸಂ. 27 ಜಮೀನು ಪೈಕಿ 4 ಎಕರೆ ವಿಸ್ತೀರ್ಣವುಳ್ಳ ಖಾಸಗಿ ಮಾಲಿಕತ್ವದ ಪ್ರದೇಶವನ್ನು ಕಡ್ಡಾಯವಾಗಿ ಭೂಸ್ವಾಧೀನ ಮಾಡಿಕೊಳ್ಳುವ ಕುರಿತು ನಿರ್ಣಯಿಸಿದ್ದು, ಮುಂದಿನ ಕ್ರಮ ಜರುಗಿಸಲಾಗುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಈ ಬೆಂಗೇರಿ ಮತ್ತು ನಾಗಶೆಟ್ಟಿಕೊಪ್ಪ ಗ್ರಾಮದ ಹಾದಿಯಲ್ಲಿರತಕ್ಕಂತಹ ಜನರಿಗೆ ಸ್ಮಶಾನ ಪ್ರದೇಶದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಂಡು ಸರ್ವೆ ನಂಬರ್ 27 ನ್ನು ಅಕ್ವೈರ್ ಮಾಡುವ ಸಲುವಾಗಿ ಪ್ರೋಸೀಡಿಂಗ್ಸ್ ಶುರು ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅಲ್ಲಿ

ಸ್ಮಶಾನ ಅತ್ಯಾವಶ್ಯಕವಾಗಿದೆ. ಈಗಾಗಲೇ ಅಲ್ಲಿ ನೂರಾರು ಬಡಾವಣೆಗಳು ಬಂದು ಲಕ್ಷಾಂತರ ಜನ ವಾಸವಾಗಿದ್ದಾರೆ. ಇದರಿಂದ ಸ್ಮಶಾನ ಇಲ್ಲದೇ ಅಲ್ಲಿ ಬಹಳ ತೊಂದರೆಯಾಗಿರುತ್ತದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸಚಿವರು ಆದಷ್ಟು ಜಾಗ್ರತೆ ಸರ್ವೆ ನಂಬರ್ 27 ಅನ್ನು ಭೂ ಸ್ವಾಧೀನ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ತ್ವರಿತಗೊಳಿಸಿ ಆದಷ್ಟು ಬೇಗ ಅಲ್ಲಿ ಸ್ಮಶಾನ ಭೂಮಿ ಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸನ್ಮಾನ್ಯ ಅಧ್ಯಕ್ಷರೇ, ನಾಗಶೆಟ್ಟಿ ಕೊಪ್ಪ ಬೆಂಗೇರಿ ಕೇಶ್ವಾಪುರ ಭಾಗದಲ್ಲಿ ಯಾವುದೇ ಸ್ಮಶಾನ ಇಲ್ಲದ ಕಾರಣ ಜನರು ಪ್ರೈವೇಟ್ ಲ್ಯಾಂಡ್‌ಗಳಲ್ಲಿ ಹೆಣಗಳನ್ನು ದಫನ್ ಮಾಡುತ್ತಿದ್ದಾರೆ. ಆದರೆ ಪ್ರೈವೇಟ್ ಲ್ಯಾಂಡ್‌ಗಳ ಓನರ್‌ಗಳು ಇದಕ್ಕೆ ತಕರಾರು ಮಾಡುತ್ತಿದ್ದಾರೆ. ಆದ ಕಾರಣ ಕಾರ್ಪೋರೇಷನ್ ಸರ್ವೆ ನಂಬರ್ 27 ರಲ್ಲಿ ಜಾಗವನ್ನು ಸ್ಮಶಾನದ ಸಲುವಾಗಿ ನಾನು ಒಮ್ಮೆ ಅಲ್ಲಿಗೆ ಭೇಟಿ ಕೊಟ್ಟು ಈ ಕೆಲಸವನ್ನು ಜಾಗ್ರತೆ ಮಾಡಿಸುತ್ತೇನೆ.

ವಿಷಯ :- ಅಂಕೋಲ ಪುರಸಭೆಗೆ ಅನುದಾನ

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 213 (1307)

ಶ್ರೀ ಕೆ. ವಿಶ್ವೇಶ್ವರ ಹೆಗಡೆ, (ಅಂಕೋಲಾ) :- ಮಾನ್ಯ ಪೌರಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಅಂಕೋಲಾ ಪುರಸಭೆಗೆ 94-95, 95-96 ಕ್ಕೆ ನೀಡಿದ ಅನುದಾನವೆಷ್ಟು?

2) ಅನುದಾನ ಯಾವ ಯಾವ ಬಾಬ್ತಿಗಾಗಿ ನೀಡಲಾಗಿದೆ. (ವಿವರ ನೀಡುವುದು)

3) 1996-97 ಅಂಕೋಲಾ ಪುರಸಭೆಗೆ ಯಾವ ಯಾವ ಯೋಜನೆಗೆ ಹಣ ಮಂಜೂರಾಗಿದೆ?

4) ಬೆಳೆಯುತ್ತಿರುವ ಅಂಕೋಲಾಕ್ಕೆ ಹೆಚ್ಚಿಗೆ ಅನುದಾನ ನೀಡುವ ಬಗ್ಗೆ ಸರ್ಕಾರ ದವರು ಕ್ರಮ ಕೈಗೊಳ್ಳುವರೇ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

1) 1994-95 - ರೂ. 17.02 ಲಕ್ಷಗಳು

1995-96 - ರೂ. 25.39 ಲಕ್ಷಗಳು